ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

# ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಂಡಬಾಳ

ಪೋಸ್ಟ್:– ಗುಂಡಬಾಳ, ತಾ:–ಅಂಕೋಲಾ, (ಉ.ಕ.)

# “ಯಶೋಗಾಥೆ”


ಮುಖ್ಯ ಶಿಕ್ಷಕರ ಹೆಸರು:– ಶ್ರೀಮತಿ ತಿಮ್ಮಕ್ಕ ಕೆ. ಗೌಡ

ಮೊ.ನಂ.:–9482100995

ಇ–ಮೇಲ್ ವಿಳಾಸ:– ghpsgundabala@gmail.com




**2024-25**

# ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಂಡಬಾಳ

## ಶಾಲಾ ಪ್ರಾರಂಭವಾದ ವರ್ಷ: 1963
## ಶಾಲೆಯ ಕಟ್ಟಡಗಳ ಸಂಖ್ಯೆ:05
## ಶಿಕ್ಷಕರ ಸಂಖ್ಯೆ : 04
## ಕಟ್ಟಡ ನಿರ್ಮಾಣ: ಎಸ್.ಎಸ್.ಎ. ಅನುದಾನ

## 3 ವರ್ಷಗಳ ಮಕ್ಕಳ ದಾಖಲಾತಿ

| ಅ.ನಂ. | ವರ್ಷ | ಗಂಡು | ಹೆಣ್ಣು | ಒಟ್ಟು |
|---|---|---|---|---|
| 1 | 2022–23 | 24 | 24 | 48 |
| 2 | 2023–24 | 24 | 25 | 49 |
| 3 | 2024–25 | 20 | 33 | 53 |

*ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಹೆಸರು:–*

*1) ತಿಮ್ಮಕ್ಕ ಕೆ. ಗೌಡ*

*2) ಮಂಜುಳಾ ಎಚ್. ನಾಯಕ*

*3) ಶೋಭಾ ಎಸ್. ನಾಯಕ*

*4) ಶಂಕರ ಬಿ. ನಾಯ್ಕ*

**ನಮ್ಮೂರ ಶಾಲೆ ಚಂದದ ಶಾಲೆ ಹೆಮ್ಮೆಯ ಶಾಲೆ**




ವಿದ್ಯಾಭ್ಯಾಸ ಮತ್ತು ಮಾನವನ ಜೀವನ ಇವೆರಡಕ್ಕೂ ನಿಕಟ ಸಂಬಂಧವಿದೆ. ಮಾನವನ ಜೀವನ ಪರಿಪೂರ್ಣವಾಗಲು ಪ್ರತಿಯೊಬ್ಬರಿಗೂ ವಿದ್ಯಾಭ್ಯಾಸ ಬೇಕೇ ಬೇಕು. ವಿದ್ಯೆಯ ಗುರಿಗಳಲ್ಲಿ ಮೊದಲನೆಯದು ವಿದ್ಯಾರ್ಥಿಯ ವ್ಯಕ್ತಿತ್ವದ ವಿಕಸನಕ್ಕೆ ಹಾಗೂ ಅವನ ಜೀವನೋಪಾಯಕ್ಕೆ, ಎರಡನೆಯದು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ತನ್ನ ಪಾತ್ರವನ್ನು ಸರಿಯಾಗಿ ನಿರ್ವಹಿಸಲು, ಮೂರನೇಯದಾಗಿ ವಿದ್ಯಾರ್ಥಿಯೂ ತನ್ನಲ್ಲಿ ಹುದುಗಿರುವ ಪ್ರತಿಭೆ, ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಹಾಗೂ ಕೊನೆಯದಾಗಿ ವಿದ್ಯಾರ್ಥಿಯೂ ತನ್ನ ನಡತೆಯನ್ನು ರೂಪಿಸಿಕೊಳ್ಳಲು ಶಿಕ್ಷಣ ಸಹಾಯ ಮಾಡುತ್ತದೆ.

ಪ್ರಕೃತಿಯ ಮಡಿಲಲ್ಲಿ ಸುತ್ತಲೂ ಸ್ವಚ್ಛ ಸುಂದರ ಪರಿಸರ ಹೊಂದಿರುವ ಮಲೆನಾಡ ಮೈಸಿರಿಗೆ ಹೊಂದಿಕೊಂಡ ಶಾಲೆ ನಮ್ಮ ಶಾಲೆ. ಇದು ತಾಲೂಕಾ ಸ್ಥಳದಿಂದ 28 ಕಿ.ಮೀ. ದೂರದಲ್ಲಿದ್ದು, ಶಾಲೆಯು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹಾಗೂ ನಿಸರ್ಗದ ಮಡಿಲಲ್ಲಿ ಮಕ್ಕಳ ಕಲಿಕೆಗೆ ಅವಕಾಶ ಕೊಟ್ಟು, ರಾಷ್ಟ್ರೀಯ ಶಿಕ್ಷಣ ನೀತಿಯೂ ವೃತ್ತಿಪರ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ರೂಢಿಸುತ್ತಿರುವ ಶಾಲೆಯಾಗಿದ್ದು, ಇಲ್ಲಿನ ಶಿಕ್ಷಕರ ಸೇವಾ ಮನೋಭಾವ ಕರ್ತವ್ಯ ನಿಷ್ಠೆ, ಸಮಯಪ್ರಜ್ಞೆ, ಪ್ರೀತಿ–ವಿಶ್ವಾಸಗಳು, ವೈಯಕ್ತಿಕ ಕಾಳಜಿಗಳು ವಿದ್ಯಾರ್ಥಿಗಳನ್ನಷ್ಟೇ ಶಾಲೆಗೆ ಆಕರ್ಷಿಸದೇ ಸಮುದಾಯವನ್ನು, ಶಿಕ್ಷಣ ಪ್ರೇಮಿಗಳನ್ನು, ದಾನಿಗಳನ್ನು ಆಕರ್ಷಿಸಿ ಶಾಲೆಯನ್ನು ಇನ್ನೂ ಶ್ರೇಯೋಭಿವೃದ್ಧಿಯೆಡೆಗೆ ಕೊಂಡೊಯ್ಯಲು ಕಾರಣೀಭೂತವಾಗಿದೆ.

ಶಾಲೆಯೂ ಜ್ಞಾನಮಂದಿರ ಮಕ್ಕಳಿಗೆ ಬಾಲ್ಯದಿಂದಲೇ ಜ್ಞಾನದ ತಳಹದಿಯನ್ನು ಪೂರೈಸುವ ಶಾಲೆಯೂ ಸಮಾಜದಲ್ಲಿ ಅತ್ಯಂತ ಗಣ್ಯಸ್ಥಾನವನ್ನು ಗಳಿಸಿದೆ. ಮಕ್ಕಳ ಬಾಲ್ಯಕ್ಕೂ, ಶಾಲೆಗೂ ಬಿಡಲಾರದ ನಂಟು. ಸುಸಂಸ್ಕೃತ ಸಮಾಜಕ್ಕೆ, ಸುಸಂಸ್ಕೃತ ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಗಳು ರಕ್ಷಾ ಕವಚವಿದ್ದಂತೆ. ಈ ದಿಶೆಯಲ್ಲಿ ನಮ್ಮ ಶಾಲೆಯೂ ಗ್ರಾಮೀಣ ಪ್ರದೇಶದಲ್ಲಿ ಇದ್ದರೂ ಕೂಡ ಯಾವುದೇ ಖಾಸಗಿ ಶಾಲೆಗೆ ಕಡಿಮೆ ಇಲ್ಲದಂತೆ, ಭೌತಿಕ ಸೌಲಭ್ಯಗಳನ್ನು ಸಮುದಾಯ ಹಾಗೂ ದಾನಿಗಳಿಂದ ಪಡೆಯುವುದರ ಜೊತೆಗೆ ಸರಕಾರದ ಹತ್ತು ಹಲವು ಯೋಜನೆಗಳನ್ನು ಯಶಸ್ವಿಯಾಗಿ ಬಳಕೆಮಾಡಿಕೊಂಡು ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಿ, ವಿದ್ಯಾರ್ಥಿಗಳ ಕಲಿಕೆಯಲ್ಲಿ, ಸರ್ವತೋಮುಖ ಅಭಿವೃದ್ಧಿ ಸಾಧಿಸುವಲ್ಲಿ ತಾಲೂಕಿನಲ್ಲಿ, ಜಿಲ್ಲೆಯಲ್ಲೂ ಮತ್ತು ರಾಜ್ಯದಲ್ಲಿಯೂ ರೂಪಿಸಿಕೊಂಡು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎನ್ನುವುದೇ ನಮ್ಮ ಶಾಲೆಯ ಬಗ್ಗೆ ಹೆಮ್ಮೆ ಮೂಡಿಸಿದೆ.

ನಮ್ಮ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಂಡಬಾಳವೂ 2024–25 ನೇ ಸಾಲಿನಲ್ಲಿ ರಾಜ್ಯಮಟ್ಟದ ಶಾಲಾ ಅಭ್ಯುದಯ ಹಸಿರು ನೈರ್ಮಲ್ಯ ಪ್ರಶಸ್ತಿ ಪಡೆದ ಹೆಗ್ಗಳಿಕೆಯೊಂದಿಗೆ ತಾಲೂಕಿನ ಉತ್ತಮ ಆಚರಣೆಗಳ ಪ್ರಸ್ತುತಿಯಲ್ಲಿ ದ್ವಿತೀಯ ಸ್ಥಾನಕ್ಕೆ ತನ್ನನ್ನು ಎತ್ತರಿಸಿಕೊಂಡಿರುವುದು ಇಲ್ಲಿನ ಶಿಕ್ಷಕರ ವೃತ್ತಿಪರತೆ, ವಿದ್ಯಾರ್ಥಿಗಳ ವೈಯಕ್ತಿಕ ಕಾಳಜಿ, ಎಲ್ಲಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳಲ್ಲಿ ಮೌಲ್ಯ ಬೆಳವಣಿಗೆಗೆ ಸಾಕ್ಷಿಯಾಗಿ ನಿಂತಿದೆ. ಶಾಲೆಯು

ಸ್ಥಾಪನೆಗೊಂಡು ಅರ್ಧ ಶತಕ ಕಳೆದರೂ ಪ್ರಗತಿಯನ್ನೇ ಕಾಣದೇ ಈ ಶಾಲೆಯೂ ಕಳೆದ ಐದು-ಆರು ವರ್ಷಗಳಲ್ಲಿ ತನ್ನ ಛಾಪನ್ನು ತಾಲೂಕು, ಜಿಲ್ಲೆ, ರಾಜ್ಯದಾದ್ಯಂತ ಮೂಡಿಸಿರುವುದು ಇಲ್ಲಿನ ವಿಶೇಷ.

ನಮ್ಮ ಶಾಲೆ 1963 ರಲ್ಲಿ ಪ್ರಾರಂಭವಾದಾಗ ಕೇವಲ 1-5 ನೇ ತರಗತಿವರೆಗೆ ಮಾತ್ರ ಬೋಧನಾ ಕಲಿಕೆ ಪ್ರಕ್ರಿಯೆ ನಡೆಯುತ್ತಿದ್ದು, 1990-91 ರಲ್ಲಿ 6ನೇ ತರಗತಿ ಪ್ರರಂಭವಾಯಿತು. ಗ್ರಾಮ ಪಂಚಾಯಿತಿಯ ಏಳು ಮಜರೆಗಳಲ್ಲಿ ಐದು ಮಜರೆಗಳು ನಮ್ಮ ಶಾಲೆಗೆ ಹತ್ತಿರವಿರುವುದರಿಂದ ಕಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಅನುಕೂಲವಾಗಲೆಂದು ಸರಕಾರದ ಯೋಜನೆಯಂತೆ 2002-2003 ನೇ ಸಾಲಿನಲ್ಲಿ ನಮ್ಮ ಶಾಲೆಯಲ್ಲಿ 1 ರಿಂದ 7 ನೇ ತರಗತಿವರೆಗೆ ಬೋಧನಾ ಚಟುವಟಿಕೆಗಳು ಪ್ರಾರಂಭಗೊಂಡವು.

## ಮಕ್ಕಳ ಪ್ರಗತಿ ವಿಶ್ಲೇಷಣೆ ವರದಿ

| ಅ.ನಂ. | ವರ್ಷ | ವಿದ್ಯಾರ್ಥಿಗಳ ಸಂಖ್ಯೆ | | | ವಾರ್ಷಿಕ ಪ್ರಗತಿ | |
|---|---|---|---|---|---|---|
| | | ಗಂ | ಹೆ | ಅಂತೂ | 1-75% | 75-100% |
| 1 | 2022-23 | 24 | 24 | 48 | 04 | 44 |
| 2 | 2023-24 | 24 | 25 | 49 | 05 | 44 |
| 3 | 2024-25 | 20 | 33 | 53 | 05 | 48 |

ಶಿಕ್ಷಕರ ಕಾರ್ಯಕ್ಷಮತೆ ಹಾಗೂ ಶಾಲೆಯನ್ನು ಉತ್ತಮ ಮಾದರಿ ಶಾಲೆಯಾಗಿ ರೂಪಿಸಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡುವ ಮನೋಭಾವ ಉಳ್ಳವರಾಗಿದ್ದು, ನಮ್ಮ ಶಾಲೆಯ ಮಕ್ಕಳ ಹಾಜರಾತಿ ಏರಿಕೆಯಾಗಲು ಕಾರಣವಾಗುತ್ತಾ ಬಂದಿದೆ. 2022-23 ರಲ್ಲಿ 50 ವಿದ್ಯಾರ್ಥಿಗಳು, 2023-24 ರಲ್ಲಿ 50 ವಿದ್ಯಾರ್ಥಿಗಳು ಮತ್ತು 2024-25 ರಲ್ಲಿ 53 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಖಾಸಗಿ ಶಾಲೆಗಳ ವಾಹನಗಳು ಹಳ್ಳಿ ಹಳ್ಳಿಗೆ ಮಕ್ಕಳನ್ನು ಕರೆಯಲು ಬರುತ್ತಿದ್ದರೂ, ನಮ್ಮ ಶಾಲೆಯ ಶೈಕ್ಷಣಿಕ ಗುಣಮಟ್ಟ ಉತ್ತಮವಾಗಿದೆ ಎನ್ನುವ ಕಾರಣಕ್ಕೆ ಪಾಲಕರು ನಮ್ಮ ಶಾಲೆಗೆ ಮಕ್ಕಳನ್ನು ಸೇರಿಸುತ್ತಿರುವುದು ಶಿಕ್ಷಕರ ಜವಾಬ್ದಾರಿಯನ್ನು ಹೆಚ್ಚಿಸಿ ಕರ್ತವ್ಯದಲ್ಲಿ ಹಗಲಿರುಳು ಶ್ರಮಿಸುವಂತಾಗಿದೆ.

ದಾಖಲಾತಿ ಆಂದೋಲನ



ಮನೆ ಭೇಟಿ



ಪಾಲಕರ ಮಾಸಿಕ ಸಭೆ



ಸಂಚಾರ





- ವಿಶೇಷ ದಾಖಲಾತಿ ಆಂದೋಲನ ಕೈಗೊಂಡು ಪ್ರತಿ ಮಗುವಿನ ಮನೆಗೆ ಭೇಟಿ ನೀಡಿ, ಪಾಲಕರಿಗೆ ನಮ್ಮ ಶಾಲೆಯಲ್ಲಿನ ಮೂಲಭೂತ ಸೌಲಭ್ಯಗಳು ಹಾಗೂ ವಿನೂತನ ಬೋಧನಾ ಕಲಿಕಾ ವಿಧಾನಗಳ ಬಗ್ಗೆ ಮನವರಿಕೆ ಮಾಡಿ, ಮಗು ಶಾಲೆಗೆ ದಾಖಲಾಗುವಂತೆ ಮಾಡುತ್ತಿದ್ದೇವೆ. ಪಾಲಕರ ಮಾಸಿಕ ಸಭೆ ಕರೆದು, ಅವರ ಮಕ್ಕಳ ಕಲಿಕೆಗೆ ಆಗುತ್ತಿರುವ ಪ್ರಗತಿ, ಮಗುವಿನ ಹಾಜರಾತಿ, ಮುಂದೆ ಮಗುವಿನ ಶಿಕ್ಷಣದ ಪ್ರಗತಿಗೆ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಮಾರ್ಗದರ್ಶನ ನೀಡಿ, ಮಗುವಿನ ಪಾಲಕರು ನಿರಂತರ ಶಿಕ್ಷಕರ ಸಂಪರ್ಕದಲ್ಲಿರುವಂತೆ ನೋಡಿಕೊಳ್ಳುತ್ತಿದ್ದೇವೆ.
- ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡಿಸಲು ಶಾಲೆಗೆ ಗೈರಾಗದಂತೆ ತಡೆಯಲು ನಾವಿನ್ಯಯುತ ಬೋಧನಾ ವಿಧಾನ, ಶಿಕ್ಷಣ ತಂತ್ರಜ್ಞಾನ, ಪರಿಸರ ವೀಕ್ಷಣೆ, ಹೊರ ಸಂಚಾರ, ನಿಸರ್ಗ ಮಡಿಲಲ್ಲಿ ಕಲಿಕೆ, ಇತ್ಯಾದಿ ಅನ್ವಯಿಕ ಬೋಧನಾ ವಿಧಾನ ಬಳಸಿ ನಿತ್ಯ ಜೀವನದ ಅನುಭವಗಳೊಂದಿಗೆ ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದೇವೆ.

**ಅನ್ವಯಿಕ ಕಲಿಕೆ**





**ವಿದ್ಯಾರ್ಥಿಗಳಿಗೆ ದಾನಿಗಳ ಸಹಾಯ**









- ❖ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ದಾನಿಗಳ ಸಹಾಯ ಪಡೆದು ಕಲಿಕೆಯಲ್ಲಿ ಪೂರಕ ಪರಿಕರಗಳನ್ನು ಒದಗಿಸುತ್ತಿದ್ದೇವೆ.

**ಸರಳ ಪ್ರಯೋಗ**



**ವಿಜೇತರಿಗೆ ಬಹುಮಾನ**



- ❖ ಗುಣಾತ್ಮಕ ಕಲಿಕೆಗೆ ವಿವಿಧ ಕ್ರಿಯಾ ಯೋಜನೆಗಳು ಉದಾ.:–KSQO, Ludo, ಪದಬಂಧ, ವಿನೋದ ಗಣಿತ, ಸರಳ ಪ್ರಯೋಗ ಇತ್ಯಾದಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಬಳಸಿ ವಿಜೇತರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದ್ದೇವೆ.

**ಆಕರ್ಷಕ ಸರಳ ಚಟುವಟಿಕೆಗಳು**





- ❖ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸೇತುಬಂಧ, ಪರಿಹಾರ ಬೋಧನೆ, ಆಕರ್ಷಕ ಸರಳ ಚಟುವಟಿಕೆಗಳ ಮೂಲಕ ಕಲಿಕಾ ಫಲಗಳನ್ನು ಗಳಿಸುವಲ್ಲಿ ಶ್ರಮವಹಿಸುತ್ತಿದ್ದೇವೆ.

**ಶೂ-ಸಾಕ್ಸ್ ವಿತರಣೆ** **ಆರೋಗ್ಯ ತಪಾಸಣೆ**





- ಇಲಾಖೆಯ ವಿವಿಧ ಯೋಜನೆಗಳಾದ ಉಚಿತ ಸಮವಸ್ತ್ರ, ಪಠ್ಯ ಪುಸ್ತಕ, ಕ್ಷೀರಭಾಗ್ಯ, ರಾಗಿ ಮಾಲ್ಟ್, ಮೊಟ್ಟೆ ವಿತರಣೆ, ಶೂ-ಸಾಕ್ಸ್, ಸಾರಿಗೆ ಭತ್ಯೆ, ವಿದ್ಯಾರ್ಥಿ ವೇತನ, ಮಾತ್ರೆಗಳ ವಿತರಣೆ, ಆರೋಗ್ಯ ತಪಾಸಣೆ, ಅಕ್ಷರದಾಸೋಹ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

**ಸಂಭ್ರಮ ಶನಿವಾರ**





- ವಿದ್ಯಾರ್ಥಿಗಳ ವೈಯಕ್ತಿಕ ಹಾಗೂ ಸಾಮಾಜಿಕ ಪ್ರಗತಿ ಸಾಧಿಸಲು ಅನುಕೂಲವಾಗುವ ಸಂಭ್ರಮ ಶನಿವಾರ, ನಾವು ಮನುಜರು, ಓದುವ ಅಭಿಯಾನ, ಶಾಲಾ ಪ್ರಾರ್ಥನಾ ಅವಧಿಯ ಚಟುವಟಿಕೆ ಮತ್ತು ರಾಷ್ಟ್ರೀಯ ಕಾರ್ಯಕ್ರಮಗಳಾದ ಮಹಾತ್ಮರ ದಿನಾಚರಣೆಗಳು ದಾನಿಗಳ ಸಿಹಿ ಹಂಚಿಕೆಯೊಂದಿಗೆ ಸಂಭ್ರಮದಿಂದ ಆಚರಿಸಲಾಗುವುದು.

## ಓದುವ ಅಭಿಯಾನ



## ಬುನಾದಿ ಮತ್ತು ಸಂಖ್ಯಾ ಶಾಸ್ತ್ರ(FLN) ಮಕ್ಕಳಲ್ಲಿ ಬುನಾದಿ ಮತ್ತು ಸಂಖ್ಯಾ ಸಾಮರ್ಥ್ಯಗಳಿಸಲು ಹಮ್ಮಿಕೊಂಡ ನಾವಿನ್ಯಯುತ ಚಟುವಟಿಕೆಗಳು:-

1) <u>ಚೆಂಡು ಹಿಡಿ ಪಾಠ ಓದು</u>:-Passing the ball ಆಟದಂತೆ ಮಕ್ಕಳನ್ನು ವೃತ್ತಾಕಾರವಾಗಿ ಕುಳ್ಳಿರಿಸಿ ಚೆಂಡನ್ನು ನೀಡಿ ಅದನ್ನು ಪಾಸ್ ಮಾಡಲು ತಿಳಿಸುವುದು. ನಂತರ ಚೆಂಡು ಯಾರ ಕೈಯಲ್ಲಿ ಬರುತ್ತದೆಯೋ ಅವರು ಶಿಕ್ಷಕರು ಹೇಳಿದ ಓದುವ ಕಾರ್ಡನ್ನು ಬಳಸಿಕೊಂಡು ಓದಲು ತಿಳಿಸುವುದು. ಓದುವ ಸಾಮರ್ಥ್ಯವನ್ನು ಮಕ್ಕಳಿಗೆ ಬರುವಂತೆ ಮಾಡುವುದು.




2) ಗಣಿತದ ಕಿಟ್‌ಗಳಲ್ಲಿರುವ ಕ್ಯೂಬ್‌ಗಳನ್ನು ಮತ್ತು ಮಣಿಗಳನ್ನು ಬಳಸಿ ಗಣಿತದ ಮೂಲ ಕ್ರಿಯೆಗಳನ್ನು ಮಾಡುವುದು.






3) ಶಬ್ದ ನಿಮ್ಮದು ವಾಕ್ಯ ನನ್ನದು:- ತರಗತಿಯಲ್ಲಿ ಯಾವುದಾದರೊಂದು ಶಬ್ಧ ಕೊಟ್ಟು ಅದರ ಬಗ್ಗೆ ವಾಕ್ಯ ಬರೆಯಲು ತಿಳಿಸುವುದು.
ಉದಾ.:- ಬೆಕ್ಕು - 1) ಬೆಕ್ಕು- ಸಾಕುವ ಪ್ರಾಣಿ.
2) ಬೆಕ್ಕು ಇಲಿ ಹಿಡಿಯುತ್ತದೆ. ಹೀಗೆ ಮಕ್ಕಳು ಬಗೆ ಬಗೆಯ ವಾಕ್ಯಗಳನ್ನು ಮಾಡುತ್ತಾ ಸಾಗುವರು.

ಶಿಕ್ಷಕರು ನಿರಂತರವಾಗಿ ಮಕ್ಕಳ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವುದರಿಂದ ನಮ್ಮ ಶಾಲೆಯಲ್ಲಿ FLNಮಕ್ಕಳ ಸಂಖ್ಯೆ ಇಳಿಮುಖವಾಗಿರುತ್ತದೆ.

## ➢ ಶಾಲಾ ಭೌತಿಕ ಪರಿಸರ:–

ಜೀವನದಲ್ಲಿ ಶಿಕ್ಷಣದ ಮಹತ್ವ ಅಪಾರವಾಗಿದೆ ಮಾನವನನ್ನು ನಿಜವಾದ ಮನುಷ್ಯನನ್ನಾಗಿ ಮಾಡುವುದು ಶಿಕ್ಷಣ. ಪ್ರಾಣಿ ವರ್ಗದಿಂದ ಮನುಷ್ಯನನ್ನು ಬೇರೆ ಮಾಡುವುದೇ ಶಿಕ್ಷಣ. ಶಿಕ್ಷಣದಿಂದ ವಿದ್ಯೆ, ವಿದ್ಯೆಯಿಂದ ಸಂಸ್ಕಾರ ಮತ್ತು ವ್ಯಕ್ತಿತ್ವ ನಿರ್ಮಾಣ ಕೇವಲ ನೌಕರಿಗಾಗಿ ಶಿಕ್ಷಣ ಅಲ್ಲ. ಆತ್ಮ ಸಂಸ್ಕಾರ ವ್ಯಕ್ತಿತ್ವ ಬೆಳವಣಿಗೆಯೊಂದಿಗೆ ಸಾರ್ಥಕತೆ ಬದುಕುವುದೇ ಶಿಕ್ಷಣ, ದೇವತಾ ಆರಾಧನೆಗೆ ದೇಗುಲಗಳು ಹೇಗೋ ಜ್ಞಾನಾರಾಧನೆಗೆ ಜ್ಞಾನದೇಗುಲಗಳು ಶಾಲೆ. ಯಾರು ಎಷ್ಟೇ ವಿದ್ಯಾವಂತರಾದರೂ ತಾವು ಬಾಲ್ಯದಲ್ಲಿ ಕಲಿತ ಶಾಲೆಯನ್ನು ಹಾಗೂ ವಿದ್ಯೆಯನ್ನು ಎಂದಿಗೂ ಮರೆಯಲಾರರು. ಈ ಪರಿಕಲ್ಪನೆಗೆ ಇನ್ನಷ್ಟು ಶಕ್ತಿ ಕೊಡುವುದೇ ನಮ್ಮ ಸರಕಾರದ ಯೋಜನೆ "ನನ್ನ ಶಾಲೆ ನನ್ನ ಜವಾಬ್ದಾರಿ". ಒಂದು ಹಳ್ಳಿಗೆ ಒಂದು ಶಾಲೆ, ಆಸ್ಪತ್ರೆ, ಪಂಚಾಯತ ಇವು ಸಾರ್ವಜನಿಕ ಪುಣ್ಯಧಾಮಗಳು ಯಾವ ಹಳ್ಳಿಯಲ್ಲಿ ಈ ಮೂರು ಸಂಸ್ಥೆಗಳು ಕ್ರಮಬದ್ಧವಾಗಿ ಕೆಲಸ ನಡೆಸುತ್ತವೆಯೋ ಆ ಹಳ್ಳಿ ಮಹತ್ವದ ವ್ಯಕ್ತಿಗಳ ಜೀವನಕ್ಕೆ ಆಶ್ರಯವಾಗುತ್ತದೆ. ಈ ದಿಶೆಯಲ್ಲಿ ನಮ್ಮ ಶಾಲೆಗೆ ದಾನಿಗಳು, ಶಿಕ್ಷಣ ಪ್ರೇಮಿಗಳು, ಹಳೆ ವಿದ್ಯಾರ್ಥಿಗಳ ಸಂಘ, ಗ್ರಾಮ ಪಂಚಾಯತ ಇತ್ಯಾದಿ ಸಂಘಟನೆಗಳು ಶಾಲೆಯ ಭೌತಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಂಡಿವೆ.

2019–20 ರಲ್ಲಿ ಹೊಸದಾಗಿ ಪ್ರಾರಂಭಿಸಲಾದ (ರಾಷ್ಟ್ರೀಯ ಹಸಿರು ಪಡೆ) ಯೋಜನೆಯ ಗುರಿ, ಉದ್ದೇಶಗಳನ್ನು ನಮ್ಮ ಶಾಲೆಯ ಎಸ್.ಡಿ.ಎಮ್.ಸಿ. ಸಭೆಯಲ್ಲಿ ಪ್ರಸ್ತಾಪಿಸಿದಾಗ ನಮ್ಮ ಎಸ್.ಡಿ.ಎಮ್.ಸಿ. ಅಧ್ಯಕ್ಷರು, ಸದಸ್ಯರು ಧನಾತ್ಮಕವಾಗಿ ಸ್ಪಂಧಿಸಿ ಪರಿಶ್ರಮವನ್ನು ಉಚಿತವಾಗಿ ನೀಡುವುದರೊಂದಿಗೆ ಉತ್ತಮ ಯೋಜನೆ ತಯಾರಿಸಿ ಇಕೋಕ್ಲಬ್ ಪ್ರಾರಂಭಿಸಲು ಉತ್ಸುಕರಾದರು ಕೇವಲ 5000/– ರೂ. ಅನುದಾನದಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲದಿದ್ದಾಗ ನೋಡೆಲ್ ಶಿಕ್ಷಕಿಯಾದ ಶ್ರೀಮತಿ ಶೋಭಾ ನಾಯಕ ತನ್ನೂರಿನ ಶಾಲೆಯ ಅಭಿವೃದ್ಧಿಗೆ ಆರ್ಥಿಕವಾಗಿ ಪ್ರೋತ್ಸಾಹಿಸಿದರು. ಶಾಲೆಯ ಎಲ್ಲಾ ಶಿಕ್ಷಕರ ಸಹಕಾರ ಪಡೆದು ಎಸ್.ಡಿ.ಎಮ್.ಸಿ. ಮುಂದಾಳತ್ವದಲ್ಲಿ 70 ಅಡಿಕೆ ಗಿಡಗಳನ್ನು ನೆಡಲಾಯಿತು. ಗಿಡ ನೆಡಲು, ಗುಂಡಿ ಅಗಿಯಲು, ಗಿಡಗಳ ಸಂರಕ್ಷಣೆಗೆ ಬೇಲಿ ಹಾಕಲು ನಮ್ಮ ಶಾಲೆಯ ಎಸ್.ಡಿ.ಎಮ್.ಸಿ. ಅಧ್ಯಕ್ಷರು, ಸದಸ್ಯರು, ಪಾಲಕ–ಪೋಷಕರು ತುಂಬು ಮನಸ್ಸಿನಿಂದ ಶ್ರಮಿಸಿದರು.





2020–21 ರಲ್ಲಿ ಮತ್ತೆ 30 ಅಡಿಕೆ ಗಿಡಗಳು 10 ಹಣ್ಣಿನ ಗಿಡಗಳನ್ನು ನೆಟ್ಟು ಅವುಗಳ ಆರೈಕೆಗೆ ಸರಕಾರದಿಂದ 3 ವರ್ಷ ಕ್ರಮವಾಗಿ 5000/– ರೂ. ನಂತೆ ಅನುದಾನ ಬಳಕೆ ಸಾಲದಿದ್ದಾಗ, ನೋಡೆಲ್ ಶಿಕ್ಷಕಿಯಾಗಿ ನಾನು ಆರ್ಥಿಕವಾಗಿ ಆಧಾರವಾಗಿ ನಿಂತು ವಿದ್ಯಾರ್ಥಿಗಳಿಗೆ ಅಕ್ಷರ ಕಲಿಕೆಯ ಜೊತೆಗೆ ಜೀವನ ನಿರ್ವಹಣೆಯ ಹಲವು ದಾರಿಗಳನ್ನು ಹಾಗೂ ಅವರಲ್ಲಿ ಹುದುಗಿರುವ ಕೌಶಲ್ಯಗಳನ್ನು ಹೊರಹಾಕುವಲ್ಲಿ ಈ ಇಕೋಕ್ಲಬ್ ತುಂಬಾ ಸಹಕಾರಿಯಾಯಿತು.









ಗಿಡಗಳ ಸಂರಕ್ಷಣೆ, ಗಿಡಗಳಿಗೆ ಗೊಬ್ಬರ ಹಾಕುವ ಕಾರ್ಯ ಎಸ್.ಡಿ.ಎಮ್.ಸಿ. ಯ ಸಹಕಾರದಲ್ಲಿ ನಡೆಯಿತು. ಈ ಹಸಿರು ಪಡೆಯ ಗುರಿ ಉದ್ದೇಶ ಸಫಲವಾಗಲು ಹತ್ತಿರದ ನರ್ಸರಿಗಳಿಗೆ ಭೇಟಿ ನೀಡಿ, ಅಲ್ಲಿನ ಅಧಿಕಾರಿಗಳನ್ನು ಸಂಪರ್ಕಿಸಿ ಗಿಡಗಳ ಆರೈಕೆ, ನೀರಿನ ಬಳಕೆ, ಎರೆಹುಳು ಗೊಬ್ಬರ ತಯಾರಿಕೆ ಇತ್ಯಾದಿ ವಿಷಯದ ಕುರಿತು ವಿವರಣೆ ಪಡೆಯುವುದು ವಿದ್ಯಾರ್ಥಿಗಳ ಕಲಿಕೆಗೆ ಸಹಕಾರಿಯಾಗಿದೆ. ಪರಿಸರ ಕಾಳಜಿ ಮತ್ತು ಗಿಡಗಳ ಸಂರಕ್ಷಣೆ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಚಿತ್ರಕಲೆ, ಭಾಷಣ ಸ್ಪರ್ಧೆ ಏರ್ಪಡಿಸಿ ಬಹುಮಾನ ನೀಡಿ ಪ್ರೋತ್ಸಾಹಿಸುವುದು ನಿರಂತರವಾಗಿ ನಡೆದು ಬಂದಿದೆ. ಸರಕಾರದ ಅನುದಾನ ಹಾಗೂ ನೋಡೆಲ್ ಶಿಕ್ಷಕಿಯ ಆರ್ಥಿಕ ನೆರವಿನೊಂದಿಗೆ ಕೈತೋಟ ಐದು ವರ್ಷಗಳನ್ನು ಪೂರೈಸಿದ್ದು ಈಗ ವಾರ್ಷಿಕವಾಗಿ 50000/– ರೂ. ಆದಾಯ ತರುವ ಕೈತೋಟವು ಆರ್ಥಿಕವಾಗಿಯೂ ಹಾಗೂ ಭೌತಿಕವಾಗಿಯೂ ಶಾಲೆಯ ಸೌಂದರ್ಯವನ್ನು ಹೆಚ್ಚಿಸಿದಷ್ಟೇ ಅಲ್ಲದೇ ಶಾಲೆಗೆ ಬರುವ ಮಕ್ಕಳು ಆರ್ಥಿಕವಾಗಿ ಹಿಂದುಳಿದವರಾಗಿದ್ದರಿಂದ ಅವರ ಕಲಿಕೆಗೆ ಪ್ರೋತ್ಸಾಹಿಸುವ ಕಾರ್ಯಗಳಿಗೆ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಬೇಕಾದ ಸೌಲಭ್ಯಗಳನ್ನು ಒದಗಿಸಲು ಇದರ ಆದಾಯ ಬಳಕೆಯಾಗಬೇಕೆನ್ನುವುದು ಕೈತೋಟ ನಿರ್ಮಾಣದ ಸಾರ್ಥಕತೆಯನ್ನು ಹೆಚ್ಚಿಸಿದೆ.



2023–24 ರಲ್ಲಿ ಜಿಲ್ಲಾ ಉತ್ತಮ ಆಚರಣೆಗಳ ಪ್ರಸ್ತುತಿಯಲ್ಲಿ ನಮ್ಮ ಅವನಿ ಇಕೋಕ್ಲಬ್ ದ್ವಿತೀಯ ಸ್ಥಾನ ಪಡೆದಿರುವುದು ವಿಶೇಷ.

ಸಮಾಜ ಮತ್ತು ಶಾಲೆಯ ನಿಕಟ ಸಂಬಂಧ ಉಳಿದುಕೊಳ್ಳಬೇಕಾದರೆ ಕೆಲವು ನಿಯಮಗಳನ್ನು ಪಾಲಿಸುವುದು ಅಗತ್ಯ. ಶಾಲೆಗಳ ಆಡಳಿತದಲ್ಲಿ ನಿಯಮಗಳಿರುವಂತೆ ಸಮಾಜಕ್ಕೂ ಸಹ ನಿಯಮಗಳಿರಬೇಕು. ತಮ್ಮ ಮಕ್ಕಳಿಗೆ ಎಂತಹ ವಿದ್ಯೆ ಬೇಕು? ಅದಕ್ಕೆ ಪೂರಕ ವಾತಾವರಣ ಹೇಗಿರಬೇಕು? ಇತ್ಯಾದಿ ಚಿಂತನೆಗಳು ಸಮಾಜದಲ್ಲಿ ಅಂದರೆ ತಂದೆ–ತಾಯಿಯವರಲ್ಲಿ ನಡೆಯಬೇಕು. ಪಾಲಕರು, ಸಮುದಾಯದ ಭಾಗವಹಿಸುವಿಕೆಯೂ ಶಿಕ್ಷಣ ವ್ಯವಸ್ಥೆಯ ಯಶಸ್ಸಿಗೆ ಅತ್ಯಂತ ಮಹತ್ವವಾದ ಅಂಶವಾಗಿದೆ. ಇದು ಶಾಲೆ ಮತ್ತು ಸಮುದಾಯದ ನಡುವಿನ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತದೆ.

## ದಾನಿಗಳಿಂದ ಶಾಲೆಗೆ ಸಿಕ್ಕ ಭೌತಿಕ ಸೌಲಭ್ಯಗಳು:–

### ➢ ಶಾಲೆಯ ಅಂಗಳದ ಮೇಲ್ಛಾವಣಿ ನಿರ್ಮಾಣ:–



ಶಾಲೆಯ ಅಂಗಳಕ್ಕೆ ಮೇಲ್ಛಾವಣಿ ಹಾಕಿಕೊಟ್ಟ ಶ್ರೀ ಅರವಿಂದ ದೇಶಪಾಂಡೆ ಬೆಂಗಳೂರು (1,20,000/–). ಮೇಲ್ಛಾವಣಿ ಹಾಕಿದ ಕೂಲಿ ಹಣ ನೀಡಿದವರು ಗಣೇಶ ಕಿಣಿ ಕುಟುಂಬ ಗುಂಡಬಾಳ(26,000/–).

➢ **ಶಾಲೆಯ ಕಮಾನು, ಗೇಟು, ಮೆಟ್ಟಿಲುಗಳ ನಿರ್ಮಾಣ:-**



ಶಾಲೆಯ ಗೇಟ್, ಕಮಾನು ಮೆಟ್ಟಿಲುಗಳ ನಿರ್ಮಾಣವನ್ನು ಮಾಡಿಕೊಟ್ಟವರು ಶಿಕ್ಷಕಿ ಶೋಭಾ ನಾಯಕ(1,05,000/-).

➢ **ಶಾಲೆಯ ಅಡುಗೆ ಕೋಣೆಗೆ ಟೈಲ್ಸ್:-**



ಶ್ರೀ ಬಾಲಕೃಷ್ಣ ವಿ. ನಾಯಕ
ಉದ್ದಿಮೆದಾರರು
ಹುಬ್ಬಳ್ಳಿ(1,00,000/-).

➢ **ಮಕ್ಕಳಿಗೆ ನೀರಿನ ಕೈತೊಳೆಯುವ ತೊಟ್ಟಿ ನಿರ್ಮಾಣ:-**



ಶ್ರೀ ಬಾಲಕೃಷ್ಣ ವಿ. ನಾಯಕ
ಉದ್ದಿಮೆದಾರರು
ಹುಬ್ಬಳ್ಳಿ(80,000/-).

➢ ಶೌಚಾಲಯಕ್ಕೆ ಹೊಸ ರೂಪ(ನವೀಕರಣ):-




ಶ್ರೀ ಬಾಲಕೃಷ್ಣ ವಿ. ನಾಯಕ ಉದ್ದಿಮೆದಾರರು ಹುಬ್ಬಳ್ಳಿ(72,000/-).

➢ ನಲಿ ಕಲಿ ವಿದ್ಯಾರ್ಥಿಗಳಿಗೆ ಟೇಬಲ್, ಖುರ್ಚಿ:-




ನಲಿಕಲಿ ಟೇಬಲ್ ಖುರ್ಚಿ ಪೂರೈಸಿದವರು ದೀಪಕ ಎಂ. ನಾಯಕ ಬೆಂಗಳೂರು (22,000/-).

➢ ಕಾರ್ಯಕ್ರಮಕ್ಕೆ ಫೈಬರ್ ಖುರ್ಚಿ ದೇಣಿಗೆ:-




ಶ್ರೀ ಬಾಲಕೃಷ್ಣ ವಿ. ನಾಯಕ ಉದ್ದಿಮೆದಾರರು ಹುಬ್ಬಳ್ಳಿ(35,000/-).

## ➢ ಕಾರ್ಯಕ್ರಮಕ್ಕೆ ಸ್ಕ್ರೀನ್ ದೇಣಿಗೆ:-



ಶಾಲಾ ಕಾರ್ಯಕ್ರಮಕ್ಕೆ ಸ್ಕ್ರೀನ್ ನೀಡಿದವರು ಸಂತೋಷ ವಿ. ನಾಯಕ ಹಳೆ ವಿದ್ಯಾರ್ಥಿ(5,000/-).

## ➢ ಸ್ಟೇಜ್ ನಿರ್ಮಾಣ(20 ಹಳೆ ವಿದ್ಯಾರ್ಥಿಗಳು):-



ಶಾಲಾ ಕಾರ್ಯಕ್ರಮಕ್ಕೆ ಸ್ಟೇಜ್ ನಿರ್ಮಿಸಿದವರು ನಮ್ಮೂರಿನ 20 ಹಳೆಯ ವಿದ್ಯಾರ್ಥಿಗಳು(24,000/-).

## ➢ ಧ್ವಜಸ್ತಂಭ ನಿರ್ಮಾಣ:-



ಶಾಲಾ ಧ್ವಜ ಸ್ತಂಭ ನಿರ್ಮಾಣ ಮಾಡಿದ ನಾಗೇಂದ್ರ ಶರದ್ ನಾಯಕ ಮತ್ತು ಕುಟುಂಬ(25,000/-).

## ಶಾಲಾ ಮೈದಾನ:-

ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಹಿಲ್ಲೂರು ಗ್ರಾಮ ಪಂಚಾಯತ ಅಂಕೋಲಾ 2023-24 ಸುಮಾರು ಅಂದಾಜು 1.85 ಲಕ್ಷ ವೆಚ್ಚದಲ್ಲಿ ವಾಲಿಬಾಲ್ ಕ್ರೀಡಾ ಅಂಕಣ ನಿರ್ಮಾಣ ಮಾಡಿ, ಶಾಲಾ ಮಕ್ಕಳಿಗೆ ಆಟ ಆಡಲು ದೈಹಿಕ ಚಟುವಟಿಕೆ ನಡೆಸಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ಹಾಗೂ ಕುಡಿಯುವ ನೀರಿಗೆ ಬೋರ್‌ವೆಲ್ ವ್ಯವಸ್ಥೆಯನ್ನು ಮಾಡಿಕೊಟ್ಟಿರುತ್ತಾರೆ.

## <u>ನಾವಿನ್ಯಯುತವಾಗಿ ತರಗತಿ ಕೋಣೆಯಲ್ಲಿ ಅಳವಡಿಸಿಕೊಂಡಿರುವ ಉಪಕ್ರಮಗಳು</u>:-





- **<u>ಅನುಭವದೊಂದಿಗೆ ಕಲಿಕೆ:-</u>** ನಿತ್ಯ ಜೀವನದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ವಿಷಯಗಳಾದ ಧಾತು, ಸಂಯುಕ್ತ ಮಿಶ್ರಣಗಳು, ಲೋಹ ಅಲೋಹಗಳು, ಆಮ್ಲ ಮತ್ತು ಪ್ರತ್ಯಾಮ್ಲಗಳು, ವಸ್ತುಗಳು ಉರಿಯಲು ಗಾಳಿ ಬೇಕು, ಬೆಳಕು ಸರಳ ರೇಖೆಯಲ್ಲಿ ಚಲಿಸುತ್ತದೆ. ತೇಲುವ ಮತ್ತು ಮುಳುಗುವ ವಸ್ತುಗಳು, ಪಾರದರ್ಶಕ, ಅಪಾರದರ್ಶಕ ಮತ್ತು ಮಿತಪಾರದರ್ಶಕ, ಕಾಯಜ ಸಂತಾನೋತ್ಪತ್ತಿ, ಭಾಷ್ಪವಿಸರ್ಜನೆ, ಆಹಾರದ ವಿಧಗಳಾದ ಸಿರಿ ಧಾನ್ಯಗಳು, ಭೌತ ಮತ್ತು ರಾಸಾಯನಿಕ ಬದಲಾವಣೆಗಳು ಇತ್ಯಾದಿ ವಿಷಯಗಳ ಪ್ರಾಯೋಗಿಕ ಕಲಿಕೆಗೆ ವತ್ತು ನೀಡಿ ಮಕ್ಕಳಲ್ಲಿ ನೈಜ ಕಲಿಕೆ ಅನುಭವ ಉಂಟುಮಾಡುವುದು.





- **<u>ನಿಸರ್ಗದಲ್ಲಿ ಕಲಿಕೆ:-</u>** ಸಸ್ಯಗಳ ಬೆಳವಣಿಗೆ, ಸಂರಕ್ಷಣೆ, ಮಣ್ಣಿನ ವಿಧಗಳು, ಮಣ್ಣಿನಲ್ಲಿ ವಾಸಿಸುವ ಜೀವಿಗಳು ನೀರಿನ ಮೂಲಗಳು, ಸಸ್ಯಗಳ ವಿಧಗಳು, ಸಸ್ಯದ ವಿವಿಧ ಭಾಗಗಳ ಪ್ರಯೋಜನಗಳು ಇತ್ಯಾದಿ ವಿಷಯಗಳನ್ನು ಹೊರಸಂಚಾರ, ಶಾಲಾ ಕೈತೋಟ, ವನಭೇಟಿ, ಕಾಡಿನ ವೀಕ್ಷಣೆ ಮೂಲಕ ಮಕ್ಕಳ ಕಲಿಕೆ ದೃಢಪಡಿಸುವುದರೊಂದಿಗೆ ಜೀವನ ನಿರ್ವಹಣೆ ಮಾರ್ಗಗಳನ್ನು ತೋರಿಸಿಕೊಡುವುದು.





- **<u>ಪೋಷಣಾ ಅಭಿಯಾನ:-</u>** ಆಹಾರ, ಸಂರಕ್ಷಣೆ, ಪ್ರಯೋಜನ, ಸ್ಥಳೀಯ ಆಹಾರ ಪದಾರ್ಥಗಳ ಬಳಕೆ, ಋತುಮಾನಕ್ಕೆ ತಕ್ಕಂತೆ ಬೆಳೆದ ಆಹಾರದ ಬಳಕೆ ಮೊದಲಾದ ಚಟುವಟಿಕೆಗಳ ಬಗ್ಗೆ ಸಾಮೂಹಿಕವಾಗಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.

- **ಆಧುನಿಕ ತಂತ್ರಜ್ಞಾನ ಬಳಕೆ:–** 'ಅಪನಾ ಚಂದ್ರಯಾನ, ಚಂದ್ರಯಾನ–3 ಉಡಾವಣೆ, ಭಾಷಣಕಲೆ, ಜೀವಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಮೊಬೈಲ್, ಲ್ಯಾಪ್‌ಟಾಪ್ ಬಳಸಿ ಕಲಿಕೆಗೆ ಉತ್ತೇಜಿಸುವುದು.





- **ಯೋಗ ದಿನಾಚರಣೆ:–** ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಯೋಗವು ಅತ್ಯಂತ ಮಹತ್ವದ ಸ್ಥಾನ ಪಡೆದಿದ್ದು ಈ ದಿಶೆಯಲ್ಲಿ ಪ್ರತಿ ವರ್ಷ ಅಂತರಾಷ್ಟ್ರೀಯ ಯೋಗವನ್ನು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಆಚರಿಸಲಾಗುತ್ತದೆ. ಮಕ್ಕಳಿಗೆ ಯೋಗದ ಮಹತ್ವ ಹಾಗೂ ವಿವಿಧ ಯೋಗಾಸನಗಳ ಪರಿಚಯ ಮಾಡಿಕೊಡಲಾಗುತ್ತದೆ.





- **ಗ್ರಂಥಾಲಯ:–** ಮಕ್ಕಳ ಜ್ಞಾನಾಭಿವೃದ್ಧಿಗೆ ಪುಸ್ತಕಗಳ ಅಧ್ಯಯನ ಅಗತ್ಯವಾಗಿದ್ದು ನಮ್ಮ ಶಾಲೆಯಲ್ಲಿ ಪ್ರತ್ಯೇಕ ಗ್ರಂಥಾಲಯ ವ್ಯವಸ್ಥೆಮಾಡಿದ್ದು, ಮಧ್ಯಾನ ಬಿಸಿಯೂಟದ ನಂತರ 4–7 ನೇ ತರಗತಿಯ ಮಕ್ಕಳು ಗ್ರಂಥಾಲಯದಲ್ಲಿದ್ದ ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಅವರ ಆಸಕ್ತಿಗೆ ತಕ್ಕ ಪುಸ್ತಕವನ್ನು ಓದುವ ಹವ್ಯಾಸ ಬೆಳೆಸಿಕೊಂಡಿರುತ್ತಾರೆ.





- **ಸಾಮೂಹಿಕ ವ್ಯಾಯಾಮ:–** ಪ್ರತಿ ಶನಿವಾರ ವಿದ್ಯಾರ್ಥಿಗಳಿಗೆ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಕಾಪಾಡಲು ಸ್ಟ್ಯಾಂಡಿಂಗ್ ಮತ್ತು ಸಿಟ್ಟಿಂಗ್ ವ್ಯಾಯಾಮಗಳು, ಲೇಝಿಮ್, ಡಂಬೆಲ್ಸ್ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿ ಅವರ ಸಂಪೂರ್ಣ ಬೆಳವಣಿಗೆಗೆ ಅವಕಾಶ ಮಾಡಿಕೊಡಲು ತೊಡಗಿಸಿಕೊಂಡಿದ್ದೇವೆ.







- **ಅಂತರಾಷ್ಟ್ರೀಯ ವಿಜ್ಞಾನ ದಿನಾಚರಣೆ:-** ಪ್ರತಿ ವರ್ಷ ಫೆಬ್ರುವರಿ 28 ರಂದು ಅಂತರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಮಕ್ಕಳ ವಯೋಮಾನಕ್ಕೆ ತಕ್ಕಂತೆ 1-3 ಮತ್ತು 4-5 ಹಾಗೂ 6-7 ಹೀಗೆ ಮೂರು ಗುಂಪುಗಳಲ್ಲಿ ವಿಂಗಡಿಸಿ ನಿಜ ಜೀವನದಲ್ಲಿ ವಿಜ್ಞಾನದ ಸರಳ ಪ್ರಯೋಗಗಳನ್ನು ಪ್ರಾತಿಕ್ಷತೆಗಳ ಮೂಲಕ ವಿದ್ಯಾರ್ಥಿಗಳೇ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುತ್ತೇವೆ. ಅಷ್ಟೇ ಅಲ್ಲದೇ ವಾರಕ್ಕೊಂದು ಪ್ರಯೋಗ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ಬುಧವಾರ ಕೊನೆಯ ಎರಡು ಅವಧಿಯನ್ನು ಪ್ರಯೋಗಗಳಿಗಾಗಿ ಮೀಸಲಿಟ್ಟು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವಲ್ಲಿ ಸಹಕರಿಸುತ್ತಿದ್ದೇವೆ.







- **ಪ್ರತಿಭಾಕಾರಂಜಿ:-** ಕಳೆದ ಮೂರು ವರ್ಷಗಳಿಂದ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ ನಮ್ಮ ಶಾಲೆಯಲ್ಲಿಯೇ ನಡೆಸುತ್ತಿದ್ದೇವೆ. ಇದಕ್ಕೆ ಕಾರಣ ನಮ್ಮೂರಿನ ಹೆಮ್ಮೆಯ ದಾನಿಗಳು, ಶಿಕ್ಷಣ ಪ್ರೇಮಿಗಳು, ಹಳೆಯ ವಿದ್ಯಾರ್ಥಿಯ ಸಂಘಗಳು ಶಾಲೆಯಲ್ಲಿ ಕಾರ್ಯಕ್ರಮ ನಡೆಸಲು ಅನುಕೂಲವಾಗುವ ಹಾಗೆ ಶಾಲೆಯ ಅಂಗಳಕ್ಕೆ ಮೇಲ್ಛಾವಣೆ, ಕಾರ್ಯಕ್ರಮದ ಸ್ಟೇಜ್ ಹಾಗೂ ಸ್ಕ್ರೀನ್‌ಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ. 2024-25 ನೇ ಸಾಲಿನ ಪ್ರತಿಭಾಕಾರಂಜಿಯ ಊಟದ ವೆಚ್ಚವನ್ನು ಕೂಡ ನಮ್ಮೂರಿನ ಹಳೆ ವಿದ್ಯಾರ್ಥಿ ಸಂಘದ ಹಳೆಯ ವಿದ್ಯಾರ್ಥಿ ಭರಿಸಿರುವುದು ನಮ್ಮೂರಿನ ದಾನಿಗಳಿಗೆ ಶಾಲೆಯ ಮೇಲಿನ ಅಭಿಮಾನ ಪ್ರೀತಿಗೆ ಸಾಕ್ಷಿಯಾಗಿದೆ.

## ಸರ್ಕಾರದಿಂದ ಶಾಲೆಗೆ ಲಭಿಸಿದ ಸೌಲಭ್ಯಗಳು:–

- ಸುಸಜ್ಜಿತ ಕಟ್ಟಡಗಳು
- ಕಟ್ಟಡಗಳ ನೆಲಕ್ಕೆ ಟೈಲ್ಸ್ ಹಾಕಿದ್ದು
- ಅಂಗಳಕ್ಕೆ ಇಂಟರ್ ಲಾಕ್ ಅಳವಡಿಕೆ
- ವರಾಂಡಕ್ಕೆ ಗ್ರೀಲ್ಸ್
- ರ್‍ಯಾಂಪ್ಸ್
- ಕುಡಿಯುವ ನೀರಿನ ಟ್ಯಾಂಕ್
- ಅಕ್ಷರದಾಸೋಹ ಕಟ್ಟಡ ಮತ್ತು ಗೋದಾಮು
- ಶಾಲಾ ಮೈದಾನ
- ಕಬಡ್ಡಿ ಕೋರ್ಟ್, ವಾಲಿಬಾಲ್ ಕೋರ್ಟ್
- ಕಂಪೌಂಡ್ ಗೋಡೆ ನಿರ್ಮಾಣ
- ಬೋರ್‌ವೆಲ್
- ಶೌಚಾಲಯ

## ವಿಶೇಷ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು:–

ಕಲಿಕೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವಿಕೆ, ಶಿಕ್ಷಕರ ಪಾಲ್ಗೊಳ್ಳುವಿಕೆ ಜನಸಮುದಾಯವನ್ನು ತಲುಪಿದಾಗ ಆ ಶಾಲೆಯ ಬಗ್ಗೆ ಸಮುದಾಯದಲ್ಲಿ ಮೂಡುವ ಅಭಿಮಾನ ಶಾಲೆಯನ್ನು ಭೌತಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ.



- ಮಕ್ಕಳ ಹುಟ್ಟು ಹಬ್ಬದ ಶುಭ ಹಾರೈಕೆ:– ಶಾಲೆಗೆ ಬರುವ ಪ್ರತಿ ಮಗುವಿನ ಹುಟ್ಟು ಹಬ್ಬಕ್ಕೆ ಶಿಕ್ಷಕರು ಉಡುಗೊರೆ ನೀಡಿ ಕಲಿಕೆಯಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳಲು ಪ್ರೇರೇಪಿಸುವುದು.



- ಪೌಷ್ಠಿಕ ಬಿಸಿಯೂಟ:– ಇಕೋಕ್ಲಬ್ ಅಡಿಯಲ್ಲಿ ಶಾಲೆಯ ಕೈತೋಟದಲ್ಲಿ ಬೆಳೆದ ತೆಂಗಿನಕಾಯಿ, ತರಕಾರಿಗಳು, ಸೊಪ್ಪು ಬಳಸಿ ಮಧ್ಯಾಹ್ನದ ಬಿಸಿಯೂಟದ ಪೌಷ್ಠಿಕಾಂಶವನ್ನು ಹೆಚ್ಚಿಸಿ ಪ್ರತಿ ಮಗುವು ಸಂತೋಷದಿಂದ ಬಿಸಿಯೂಟ ಸವಿಯುವಂತೆ ಕ್ರಮ ಕೈಗೊಳ್ಳುತ್ತಿದ್ದೇವೆ. ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರು ಕೂಡ ಊಟ ಸವಿಯುವುದು ಮಕ್ಕಳು ಮತ್ತು ಶಿಕ್ಷಕರ ನಡುವೆ ಆತ್ಮೀಯ ಬಾಂಧವ್ಯ ಉಂಟುಮಾಡುವುದು.







- <u>ಮಕ್ಕಳ ಆರೋಗ್ಯದ ಬಗ್ಗೆ</u>:- ವೈಯಕ್ತಿಕ ಕಾಳಜಿ, ಸುರಕ್ಷತೆ ಬಗ್ಗೆ ಸಮಿತಿ ರಚಿಸಿ, ಸಮುದಾಯದ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಿ ಸಂದರ್ಭ ಸಿಕ್ಕಾಗಲೆಲ್ಲ ವೈದ್ಯರ, ಆರೋಗ್ಯ ಕಾರ್ಯಕರ್ತೆಯರ ಸಲಹೆ ಪಡೆಯುತ್ತಿದ್ದೇವೆ.
- ವಾರಕೊಮ್ಮೆ ಎರಡು ಅವಧಿಯನ್ನು ನಮ್ಮ ಸಂಸ್ಕೃತಿ, ಕಲೆ-ಕ್ರೀಡೆ ವಿಷಯಕ್ಕೆ ಸಂಬಂಧಿಸಿದಂತೆ ಮಗುವಿನ ಆಸಕ್ತಿಗೆ ಅನುಗುಣವಾಗಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಅವಕಾಶ ನೀಡುವುದು.
- <u>ಮ್ಯಾಟ್ರಿಕ್ ಮೇಳ</u>:- ವಿದ್ಯಾರ್ಥಿಗಳಲ್ಲಿ ವ್ಯವಹಾರ ಜ್ಞಾನ, ಸಂಭಾಷಣಾ ಕೌಶಲ್ಯ ವೃದ್ಧಿಪಡಿಸಲು ಸಹಾಯಕವಾಗುವ ಮಕ್ಕಳ ಸಂತೆಯನ್ನು ಶಾಲೆಯಲ್ಲಿ ಪ್ರತಿ ವರ್ಷ ಕೈಗೊಂಡು, ಸಂಪೂರ್ಣ ನಿರ್ವಹಣೆಯನ್ನು ವಿದ್ಯಾರ್ಥಿಗಳೇ ನಿರ್ವಹಿಸುವುದು. ಉತ್ತಮ ವ್ಯವಹಾರ ಮಾಡಿ ಲಾಭ ಗಳಿಸಿದ ತಂಡಕ್ಕೆ ಬಹುಮಾನ ನೀಡಿ ಪ್ರೋತ್ಸಾಹಿಸುವುದು.
- <u>ಪ್ರಾರ್ಥನಾ ವೇಳೆ</u>:- ಭಾಷಾ ಮಾಸಾಚರಣೆಯ ಉದ್ದೇಶದಿಂದ ವಾರದಲ್ಲಿ ಎರಡು ದಿನ ಕನ್ನಡ, ಎರಡು ದಿನ ಇಂಗ್ಲಿಷ್, ಎರಡು ದಿನ ಹಿಂದಿ, ಮೂರು ಭಾಷೆಗಳಲ್ಲಿ ಪ್ರಾರ್ಥನ ಚಟುವಟಿಕೆಗಳನ್ನು ಕೈಗೊಳ್ಳುವುದು. ಕೊನೆಯಲ್ಲಿ ನಮ್ಮ ಇಂಗ್ಲೀಷ್ ಭಾಷೆಯಲ್ಲಿ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸುವುದು. ದಿನಪತ್ರಿಕೆಯಲ್ಲಿ ಬಂದಿದ್ದ ಮುಖ್ಯಾಂಶವನ್ನು ಓದಿದ ನಂತರ ಮಕ್ಕಳಿಂದ ಮತ್ತೊಮ್ಮೆ ಕೇಳಿ ತಿಳಿಸುವುದು ಇದರಿಂದ ದಿನ ಪತ್ರಿಕೆ ಮುಖ್ಯಾಂಶಗಳು ಮಕ್ಕಳ ಮನಸ್ಸಿನಲ್ಲಿ ಉಳಿಯುತ್ತವೆ.







ಕೈತೋಟದಲ್ಲಿ ಬೆಳೆದ ಹಣ್ಣು ಮತ್ತು ತರಕಾರಿಗಳು.

## ಶಾಲೆಗೆ ಲಭಿಸಿದ ಗೌರವ ಪ್ರಶಸ್ತಿಗಳು:-




- 2023–24 ರಲ್ಲಿ ಜಿಲ್ಲಾ ಮಟ್ಟದ ಉತ್ತಮ ಪ್ರಸ್ತುತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತೇವೆ.
- 2024–25 ರಲ್ಲಿ ರಾಜ್ಯ ಮಟ್ಟದ ಹಸಿರು ನೈರ್ಮಲ್ಯದ ಶಾಲಾ ಅಭ್ಯುದಯ ಪ್ರಶಸ್ತಿಯನ್ನು ಪಡೆದಿರುತ್ತದೆ.
- 2024–25 ರಲ್ಲಿ ತಾಲೂಕಾ ಮಟ್ಟದ ಉತ್ತಮ ಆಚರಣೆಗಳ ಪ್ರಸ್ತುತಿ ಕಾರ್ಯಗಾರದಲ್ಲಿ ನಮ್ಮ ಶಾಲೆ ದ್ವಿತೀಯ ಸ್ಥಾನ ಪಡೆದಿರುತ್ತದೆ.







## ಉಪಸಂಹಾರ:

ಮಾನವ ಜೀವನದಲ್ಲಿ ಒಂದು ಮಹತ್ವದ ಘಟ್ಟವೇ ಶಿಕ್ಷಣ. ಅನುಭವ ಬದುಕನ್ನು ಹಸನುಗೊಳಿಸಿದರೆ, ಶಿಕ್ಷಣ ಹಸನಾದ ಬದುಕಿಗೊಂದು ಅರ್ಥ ಕೊಡುತ್ತದೆ. ಸಸಿಯೊಂದು ಮರವಾಗಲು ಗಾಳಿ, ಬೆಳಕು, ನೀರು ಎಷ್ಟು ಅವಶ್ಯಕವೋ ಹಾಗೇ ಮಗುವು ಸತ್ಪ್ರಜೆಯಾಗಲು ಉತ್ತಮ ಶಿಕ್ಷಣ ಹಾಗೂ ಶಿಕ್ಷಕರು ಅವಶ್ಯ. ಸುಂದರ ಸಮಾಜ ನಿರ್ಮಾತ್ರರು ಶಿಕ್ಷಕರು, ಶಿಕ್ಷಕ ವೃತ್ತಿ ಒಂದು ಜೀವನ ನಿರ್ವಹಣೆಯ ವೃತ್ತಿಯಲ್ಲ ಶ್ರದ್ಧೆಯಿಂದ ಸಮಾಜದಲ್ಲಿ ಮಕ್ಕಳ ಭವಿಷ್ಯ ಉಜ್ವಲವಾಗಿ ರೂಪಿಸಲು ಇರುವ ಜವಾಬ್ದಾರಿಯಾಗಿದೆ. ಇಂತಹ ಜವಾಬ್ದಾರಿ ಹೊರಲು ವಿಸ್ತ್ರತ ಜ್ಞಾನ, ತಾಳ್ಮೆ, ಆಂತರ್ಯದಲ್ಲಿ ನಿಷ್ಕಲ್ಮಶ ಪ್ರೀತಿ, ಸಹನೆ, ಸಹಕಾರ ಗುಣಗಳು ಮೇಳೈಸಿಕೊಂಡಾಗ ಸಮುದಾಯ, ಸಮಾಜ, ಎಸ್.ಡಿ.ಎಮ್.ಸಿ., ಪಾಲಕ-ಪೋಷಕರು, ಶಿಕ್ಷಣ ಪ್ರೇಮಿಗಳು, ದಾನಿಗಳು, ಹಳೆ ವಿದ್ಯಾರ್ಥಿಗಳ ಸಂಘ, ಸಹೋದ್ಯೋಗಿಗಳ ಸಹಕಾರ ಪ್ರೀತಿಯೊಂದಿಗೆ ಶಾಲೆಯ ಅಭ್ಯುದಯ ಸಾಧ್ಯ. ಜೊತೆಗೆ ಮಕ್ಕಳ ಮನಸ್ಸಿನಲ್ಲಿ ಗುರುವಿನ ಸ್ಥಾನದ ಶ್ರೇಷ್ಠತೆಯ ಗೌರವಭಾವ ಮೂಡುವುದರಲ್ಲಿ ಸಂಶಯವಿಲ್ಲ.

ಗುಂಡಬಾಳ ಊರಿನಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದು ಇದೇ ಶಾಲೆಯಲ್ಲಿಯೇ ಕಲಿತು, ಇದೇ ಶಾಲೆಯಲ್ಲಿಯೇ ಸೇವೆ ಸಲ್ಲಿಸುತ್ತಿರುವುದು ನನ್ನ ಸೌಭಾಗ್ಯ, ಇದರಿಂದ ನನ್ನೂರಿನಲ್ಲಿಯೇ ಶಿಕ್ಷಣ ಪಡೆದು ವೃತ್ತಿಗೋಸ್ಕರ ದೂರದೂರದಲ್ಲಿದ್ದ ಎಲ್ಲ ಶಿಕ್ಷಣ ಪ್ರೇಮಿಗಳನ್ನು, ದಾನಿಗಳನ್ನು ಸಂಪರ್ಕಿಸಿ ವಾಟ್ಸ್ಯಾಪ್ ಗ್ರೂಪ್ ಮಾಡಿ, ನಮ್ಮ ಶಾಲೆಗೆ ಬೇಕಾದ ಭೌತಿಕ ಸೌಲಭ್ಯಗಳ ಪಟ್ಟಿ ತಯಾರಿಸಿ, ಕಲಿತ ಶಾಲೆಗೆ ದೇಣಿಗೆ ನೀಡಲು ಇದೊಂದು ಸದಾವಕಾಶ. "ನನ್ನ ಶಾಲೆ ನನ್ನ ಜವಾಬ್ದಾರಿ" ಈ ಯೋಜನೆಯಡಿ ಈ ಅವಕಾಶವನ್ನು ನನ್ನೂರಿನ ಜನರು ಬಳಸಿಕೊಳ್ಳುತ್ತಾರೆ ಎನ್ನುವ ಆತ್ಮ ವಿಶ್ವಾಸದೊಂದಿಗೆ ಹೆಜ್ಜೆ ಹಾಕಿದಾಗ ಇದನ್ನು ಸಾಕಾರಗೊಳಿಸಿದವರು ನಮ್ಮೂರಿನ ದಾನಿಗಳು. ಶಾಲೆಯ ಅಂಗಳಕ್ಕೆ ಮೇಲ್ಹಾವಣಿ ಹಾಕಿಕೊಟ್ಟ ಶ್ರೀ ಅರವಿಂದ ದೇಶಪಾಂಡೆ ಬೆಂಗಳೂರು(1,20,000/-). ಮೇಲ್ಹಾವಣಿ ಹಾಕಿದ ಕೂಲಿ ಹಣ ನೀಡಿದ(26,000/-) ಗಣೇಶ ಕಿಣಿ

ಕುಟುಂಬ ಗುಂಡಬಾಳ. ಶಾಲೆಯ ಗೇಟ್, ಕಮಾನು ಮೆಟ್ಟಿಲುಗಳ ನಿರ್ಮಾಣವನ್ನು ಮಾಡಿದ ಶಿಕ್ಷಕಿ ಶೋಭಾ ನಾಯಕ(ನನ್ನ ತಾಯಿ ದಿವಂಗತ ಶಾಂತಿ ನಾಯಕ ಸ್ಮರಣಾರ್ಥ 1,05,000/–). ಅಡುಗೆ ಕೋಣೆಗೆ ಟೈಲ್ಸ್, ನೀರಿನ ಕೈ ತೊಳೆಯುವ ತೊಟ್ಟಿ, ಶೌಚಾಲಯಕ್ಕೆ ಹೊಸ ರೂಪ ಹಾಗೂ ಕಾರ್ಯಕ್ರಮಗಳಿಗೆ ಅನುಕೂಲವಾಗಲೆಂದು 110 ಫೈಬರ್ ಖುರ್ಚಿಗಳನ್ನು ನೀಡಿದ (2,95,000/–) ಶ್ರೀ ಬಾಲಕೃಷ್ಣ ವಿ. ನಾಯಕ ಉದ್ದಿಮೆದಾರರು ಹುಬ್ಬಳ್ಳಿ. ನಲಿಕಲ ಟೇಬಲ್ ಖುರ್ಚಿ ಪೂರೈಸಿದ(22,000/–) ದೀಪಕ ಎಂ. ನಾಯಕ ಬೆಂಗಳೂರು. ಶಾಲಾ ಧ್ವಜ ಸ್ತಂಭ ನಿರ್ಮಾಣ ಮಾಡಿದ(25,000/–) ನಾಗೇಂದ್ರ ಶರದ್ ನಾಯಕ ಮತ್ತು ಕುಟುಂಬ. ಶಾಲಾ ಕಾರ್ಯಕ್ರಮಕ್ಕೆ ಸ್ಟೇಜ್ ನಿರ್ಮಿಸಿದ ನಮ್ಮೂರಿನ 20 ಹಳೆಯ ವಿದ್ಯಾರ್ಥಿಗಳು(24,000/–) ಹಾಗೂ ಶಾಲಾ ಕಾರ್ಯಕ್ರಮಕ್ಕೆ ಸ್ಟೇಜ್‌ನ ಸ್ಕ್ರೀನ್(5,000/–) ನೀಡಿದ ಸಂತೋಷ ವಿ. ನಾಯಕ ಹಳೆ ವಿದ್ಯಾರ್ಥಿ ಹೀಗೆ ಹತ್ತು ಹಲವು ಸೌಲಭ್ಯಗಳನ್ನು ನೀಡಿ ನನ್ನೂರಿನ ದಾನಿಗಳು ದಾಖಲೆ ಬರೆದಿದ್ದಾರೆ. ಅವರ ಈ ಶಿಕ್ಷಣ ಪ್ರೇಮ ತಾವು ಕಲಿತ ಶಾಲೆಯ ಮೇಲಿನ ಅಭಿಮಾನ ಇಂದು ನಮ್ಮ ಶಾಲೆಯು ಅನೇಕ ಭೌತಿಕ ಸೌಲಭ್ಯಗಳನ್ನು ಪಡೆದು ಕಂಗೊಳಿಸುತ್ತಿದೆ. ಇನ್ನು ಅನೇಕ ಭೌತಿಕ ಸೌಲಭ್ಯಗಳನ್ನು ಒದಗಿಸಲು ಹಳೆ ವಿದ್ಯಾರ್ಥಿ ಸಂಘದ ಎಲ್ಲಾ ಹಳೆಯ ವಿದ್ಯಾರ್ಥಿಗಳು ಉತ್ಸುಕರಾಗಿರುವುದು ಶಿಕ್ಷಕರಾದ ನಮಗೆ ಇನ್ನಷ್ಟು ದಕ್ಷತೆಯಿಂದ ಕರ್ತವ್ಯ ನಿರ್ವಹಿಸಲು ಪ್ರೇರೇಪಿಸುತ್ತಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ತಮ್ಮ ಪಾಲಕರು ಶಾಲೆಯ ಅಭಿವೃದ್ಧಿಗೆ ಶ್ರಮಿಸುವುದು ಚಿಕ್ಕಂದಿನಿಂದಲೇ ಕಲಿತ ಶಾಲೆಯ ಬಗ್ಗೆ ಗೌರವ ಹೆಮ್ಮೆ ಮೂಡುವುದರ ಜೊತೆಗೆ ಉತ್ತಮ ಮೌಲ್ಯ ಬೆಳೆಸುವಲ್ಲಿ ಸಹಕಾರಿಯಾಗಿದೆ. ಶಾಲೆಯ ಜೊತೆ ನಿಕಟ ಸಂಬಂಧ ಇರುವುದರಿಂದ ಕಲಿಕೆಯಲ್ಲಿ ಪ್ರಗತಿ ಕಾಣುವಂತಾಗಿದೆ. ಸಮುದಾಯ, ಹಳೆ ವಿದ್ಯಾರ್ಥಿ ಸಂಘ, ಎಸ್.ಡಿ.ಎಮ್.ಸಿ., ಪಾಲಕ–ಪೋಷಕರ ಸಹಕಾರ ಕೊಡುಗೆಯಿಂದ ಕಾಲ ಕಾಲಕ್ಕೆ ನಮ್ಮ ಇಲಾಖಾ ಅಧಿಕಾರಿಗಳ ಭೇಟಿ ಹಾಗೂ ಮಾರ್ಗದರ್ಶನದಿಂದ ಮಾದರಿ ಶಾಲೆಯಾಗಿ ರೂಪುಗೊಳ್ಳುತ್ತಿರುವುದು ನಮ್ಮೂರಿಗೆ ಹೆಮ್ಮೆಯಾಗಿದೆ. ಶಾಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಸರ್ವರಿಗೂ ಪ್ರೀತಿಪೂರ್ವಕ ಧನ್ಯವಾದಗಳು.

ಸಂಗ್ರಹ:

ಇಕೋ ಕ್ಲಬ್ ಹಾಗೂ ಹಳೆ ವಿದ್ಯಾರ್ಥಿ ಸಂಘದ ನೋಡೆಲ್ ಶಿಕ್ಷಕಿ
ಶೋಭಾ ಎಸ್. ನಾಯಕ
ಮೊ.ನಂ.: 9663642450
ಗುಂಡಬಾಳ, ಅಂಕೋಲಾ, ಉ.ಕ.